# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕಾಣೆಯಾದ ಶ್ರೀ ಮಲ್ಲಪ್ಪ ವಿ ಗಲಬಿ, (ಸಹಾಯಕ ಕೃಷಿ ಅಧಿಕಾರಿ) ಇವರ ಧರ್ಮಪತ್ನಿಯವರಾದ ಶ್ರೀಮತಿ ಸುಧಾ ಕೋ ಮಲ್ಲಪ್ಪ ಇವರಿಗೆ ಕುಟುಂಬ ಪಿಂಚಣಿಯನ್ನು ಮತ್ತು ಆರ್ಥಿಕ ಸೌಲಭ್ಯಗಳನ್ನು ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ:

1. ಕೃಷಿ ಆಯುಕ್ತರ ಪತ್ರದ ಸಂಖ್ಯೆ: ಸಿಬ್ಬಂದಿ-1/ಪಿಂಚಣಿ/28/2011-12 ದಿನಾಂಕ: 02-04-2013.
2. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಆರ್ಥಿಕ(ವಿಶೇಷ) 11 ಕುವಿವೇ 1987, ದಿನಾಂಕ: 21-03-1988.

*********

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ, ದಿನಾಂಕ: 02-04-2013ರ ಪತ್ರದಲ್ಲಿ, ಆಯುಕ್ತರು, ಕೃಷಿ ಇಲಾಖೆ, ಬೆಂಗಳೂರು ಇವರು, ಕಾಣೆಯಾದ ಶ್ರೀ ಮಲ್ಲಪ್ಪ ವಿ ಗಲಬಿ., ಸಹಾಯಕ ಕೃಷಿ ಅಧಿಕಾರಿ ಇವರ ಧರ್ಮಪತ್ನಿಯವರಾದ ಶ್ರೀಮತಿ ಸುಧಾ ಕೋ ಮಲ್ಲಪ್ಪ ಇವರಿಗೆ ಕುಟುಂಬ ಪಿಂಚಣಿ ಮತ್ತು ಆರ್ಥಿಕ ಸೌಲಭ್ಯಗಳನ್ನು ಮಂಜೂರು ಮಾಡುವ ಬಗ್ಗೆ ಪ್ರಸ್ತಾವಿಸಿರುತ್ತಾರೆ. ಮುಂದುವರಿದು, ಓದಲಾದ ಸದರಿ ವಿಷಯದಲ್ಲಿ ಕ್ರಮಾಂಕ(2)ರಲ್ಲಿನ ಸರ್ಕಾರದ ಅಧಿಕೃತ ಜ್ಞಾಪನದಂತೆ, ಆರಕ್ಷಕ ಠಾಣೆಯಿಂದ ಕಾಣೆಯಾದ ನೌಕರನನ್ನು ಹುಡುಕಲು ಪೋಲೀಸರು ಮಾಡಿದ ಪ್ರಯತ್ನಗಳು ನಿಷ್ಫಲವಾಗಿತ್ತೆಂಬ ವರದಿ, ಪ್ರಥಮ ವರ್ತಮಾನ ವರದಿ, ಕಾಣೆಯಾದ ನೌಕರನ ಪತ್ನಿ ಶ್ರೀಮತಿ ಸುಧಾ ಕೋ ಎಂ ಗಲಬಿ ಇವರು ರೂ. 100=00 ರ ಮುದ್ರಾಂಕ ಕಾಗದದ ಮೇಲೆ ಇಬ್ಬರೂ ಜಾಮೀನುದಾರರೊಂದಿಗೆ ಬರೆದುಕೊಟ್ಟ ನಷ್ಟಬಂಧಿ ಪ್ರಮಾಣ ಪತ್ರ, ಒಂದು ವೇಳೆ ಕಾಣೆಯಾದ ನೌಕರನು ಹಿಂದಿರುಗಿ ಬಂದು ಸರ್ಕಾರಕ್ಕೆ ಕ್ಲೇಮು ಸಲ್ಲಿಸಿದ ಸಂದರ್ಭದಲ್ಲಿ, ಕುಟುಂಬಕ್ಕೆ ಪಾವತಿ ಮಾಡಿದ ಮೊಬಲಗನ್ನು ಸರ್ಕಾರಿ ನೌಕರನಿಗೆ ಪಾವತಿ ಮಾಡಬೇಕಾದ ಮೊಬಲಗಿಗೆ ಹೊಂದಾಣಿಕೆ ಮಾಡಿಕೊಳ್ಳಲು ಅವರ ಪತ್ನಿ ಸಲ್ಲಿಸಿರುವ ವಚನ ಪ್ರಮಾಣ ಪತ್ರವನ್ನು ಸಹಾಯಕ ಕೃಷಿ ನಿರ್ದೇಶಕರು, ರಾಮದುರ್ಗ ಇವರು ದೃಢೀಕರಿಸಿರುತ್ತಾರೆಂದು ವರದಿ ಮಾಡಿ, ಸದರಿ ನೌಕರನು ಕಾಣೆಯಾದ ಬಗ್ಗೆ ದಿನ ಪತ್ರಿಕೆಯಲ್ಲಿ ಪ್ರಕಟಿಸಿರುವ ಪ್ರತಿಯೊಂದಿಗೆ, ಶ್ರೀಮತಿ ಸುಧಾ ಕೋ ಮಲ್ಲಪ್ಪ ಗಲಬಿ ಇವರಿಗೆ ಕುಟುಂಬ ಪಿಂಚಣಿ ಮತ್ತು ಆರ್ಥಿಕ ಸೌಲಭ್ಯಗಳನ್ನು ಮಂಜೂರು ಮಾಡುವಂತೆ ಪ್ರಸ್ತಾವಿಸಿರುತ್ತಾರೆ.

ಕೃಷಿ ಆಯುಕ್ತರ ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಶ್ರೀಮತಿ ಸುಧಾ ಕೋ ಮಲ್ಲಪ್ಪ ಗಲಬಿ ಇವರಿಗೆ ಕುಟುಂಬ ಪಿಂಚಣಿ ಮತ್ತು ಆರ್ಥಿಕ ಸೌಲಭ್ಯಗಳನ್ನು ಮಂಜೂರು ಮಾಡಲು ತೀರ್ಮಾನಿಸಿರುತ್ತದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 10 ಕೃಪಇ 2013**
**ಬೆಂಗಳೂರು, ದಿನಾಂಕ: 26/10/2013**

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳಿಂದಾಗಿ ಸರ್ಕಾರವು, ಕಾಣೆಯಾದ ಶ್ರೀ ಮಲ್ಲಪ್ಪ ವಿ ಗಲಬಿ., ಸಹಾಯಕ ಕೃಷಿ ಅಧಿಕಾರಿ ಇವರಿಂದ ಸರ್ಕಾರಕ್ಕೆ ಬರಬೇಕಾದ ಬಾಕಿ ಯಾವುದಾದರೂ ಇದ್ದಲ್ಲಿ, ಅದನ್ನು ಕಟಾವು ಮಾಡುವುದರೊಂದಿಗೆ, ಅವರ ಧರ್ಮಪತ್ನಿಯವರಾದ ಶ್ರೀಮತಿ ಸುಧಾ ಕೋ ಮಲ್ಲಪ್ಪ ಇವರಿಗೆ ಸರ್ಕಾರದ ಅಧಿಕೃತ

ಜ್ಞಾಪನ ಸಂಖ್ಯೆ: ಆರ್ಥಿಕ(ವಿಶೇಷ) 11 ಕುವಿವೇ 1987, ದಿನಾಂಕ: 21-03-1988 ರಲ್ಲಿನ ಕಂಡಿಕೆ-4 ಮತ್ತು 5 ರಲ್ಲಿನ ಷರತ್ತಿಗೊಳ್ಳಪಟ್ಟು, ಕುಟುಂಬ ಪಿಂಚಣಿ ಮತ್ತು ಆರ್ಥಿಕ ಸೌಲಭ್ಯಗಳನ್ನು ಮಂಜೂರು ಮಾಡಲು ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆ(ವಿಶ್ರಾಂತಿ ವೇತನ) ಇವರ ಟಿಪ್ಪಣಿ ಸಂಖ್ಯೆ: ಆಇ 148 ಪಿಇಎನ್1 2013, ದಿನಾಂಕ: 31-08-2013 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ,

(ಮಂಜುನಾಥ್ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

ಇವರಿಗೆ:-

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಆಯುಕ್ತರು, ಕೃಷಿ ಇಲಾಖೆ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಇವರ ಆಪ್ತ ಕಾರ್ಯದರ್ಶಿ,
4. ಸಂಬಂಧಿಸಿದ ಅಧಿಕಾರಿಗಳು (ಆಯುಕ್ತರು,ಕೃಷಿ ಇಲಾಖೆ).
5. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.